**Government of Karnataka**
**Deposition Sheet (R.P.N.57) Form 4 Criminal**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 534/2025 |

ದಿನಾಂಕ 30-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 5 ಪ್ರಾಸಾಃ 4

| | |
|---|---|
| ಹೆಸರು | ಹುಲ್ಲಪ್ಪ |
| ತಂದೆಯ ಹೆಸರು | ರಾಮಪ್ಪ |
| ವಯಸ್ಸು | 38 ವರ್ಷ |
| ಉದ್ಯೋಗ | ಉಪವಲಯ ಅರಣ್ಯಾಧಿಕಾರಿಗಳು ಐಸಿಟಿ ಶಾಖೆ ದೇವದುರ್ಗ |
| ವಾಸಸ್ಥಳ | ಮೇದಿನಾಪುರ |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ -**

ನಾನು ಸುಮಾರು 1 ವರೆ ವರ್ಷದಿಂದ ಉಪವಲಯ ಅರಣ್ಯಾಧಿಕಾರಿಗಳು ದೇವದುರ್ಗ ವಲಯದಲ್ಲಿ ಐಸಿಟಿ ಶಾಖೆಯಲ್ಲಿ ಕೆಲಸ ಮಾಡಿಕೊಂಡಿದ್ದೇನೆ.

ದಿನಾಂಕ: 07-07-2024 ರಂದು ಬೆಳಿಗ್ಗೆ 9-30 ಗಂಟೆಗೆ ನಾನು ಕರ್ತವ್ಯದಲ್ಲಿದ್ದಾಗ, ನನಗೆ ಪೋನ್ ಕರೆ ಬಂದು ಮಾಹಿತಿ ಬಂದಿದ್ದೇನೆಂದರೆ ದೇವದುರ್ಗ ತಾಲೂಕಿನ ಕಮದಾಳ ಗ್ರಾಮದ ಗುಡ್ಡದಲ್ಲಿ ಚಿರತೆ ಕಾಣಿಸಿಕೊಂಡಿದ್ದು, ಸದರಿ ಚಿರತೆಯು 3 ಜನರಿಗೆ ದಾಳಿ ಮಾಡಿ ಗಾಯ ಮಾಡಿದ್ದು, ಮಾಹಿತಿ ಬಂದ ಮೇರೆಗೆ ನಾನು ಮತ್ತು ಸಿಬ್ಬಂದಿಯವರಾದ ಚಾಸಾ-1, 4 ರಿಂದ 13 ರವರು ಚಿರತೆ ಕಾರ್ಯಾಚರಣೆಯಲ್ಲಿದ್ದಾಗ, ಸಂಜೆ 4-30 ಗಂಟೆ ಸುಮಾರಿಗೆ ಕಮದಾಳ ಗ್ರಾಮದಲ್ಲಿ ಚಿರತೆ ಕಾರ್ಯಾಚರಣೆಯಲ್ಲಿದ್ದಾಗ, ಅಲ್ಲಿದ್ದ ಜನರಲ್ಲಿ ಯಂಕಪ್ಪ, ರಂಗಪ್ಪ, ಮಲ್ಲಣ್ಣ ಮತ್ತು ಸೋಮರಡ್ಡಿ ಇವರು ನಮಗೆ ಅವಾಚ್ಯ ಶಬ್ದಗಳಿಂದ ಬೈದು ನೀವು ಯಾವ ಅರಣ್ಯಾಧಿಕಾರಿಗಳು ನೀವು ಇಷ್ಟೆಲ್ಲಾ ಅಧಿಕಾರಿಗಳು ಇದ್ದರು ಒಂದು ಚಿರತೆಯನ್ನು ಹಿಡಿಯುವುದಕ್ಕೆ ಆಗುವುದಿಲ್ಲ ಎಂದು ಬೈದು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಚಿರತೆಯನ್ನು ರಕ್ಷಣೆ ಮಾಡಲು ನಮಗೆ ಆರೋಪಿತರು ಬಿಟ್ಟಿರುವುದಿಲ್ಲ. ಚಿರತೆಯನ್ನು ಹೊಡೆದು ಕೊಲೆ ಮಾಡಿರುತ್ತಾರೆ. ಸಾಕ್ಷಿದಾರರು ಮೃತ ಚಿರತೆಯ ಎರಡು ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ಈಗಾಗಲೇ ಕ್ರಮವಾಗಿ ನಿ ಪಿ 4 ಮತ್ತು 5 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿತರನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ಈ ಬಗ್ಗೆ ನಾನು ತನಿಖಾಧಿಕಾರಿಗಳಿಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲು: 1ನೇ ಆರೋಪಿ ಪರವಾಗಿ ಶ್ರೀ ಎಸ್ ಪಿ ವಕೀಲರಿಂದ:**

1. ಬಾತ್ಮಿ ಬಂದಾಗ ನಾನು ಮಸರಕಲ್ ವಲಯದ ಕಾಕರಗಲ್ ಗ್ರಾಮದಲ್ಲಿ ಕರ್ತವ್ಯದಲ್ಲಿದ್ದೇನು. ಬಾತ್ಮಿ ಬಂದಾಗ ನಾನೊಬ್ಬನೆ ಇದ್ದೇನು. ಬಾತ್ಮಿ ಬಂದ ನಂತರ ನಾನು ಕೊಪ್ಪರ ಕ್ರಾಸ್ ಹತ್ತಿರ

ಬಂದಿರುತ್ತೇನೆ ಅಲ್ಲಿಂದ ಅಧಿಕಾರಿಗಳೊಂದಿಗೆ ಜೀಪ್ ನಲ್ಲಿ ಸ್ಥಳಕ್ಕೆ ಹೋಗಿರುತ್ತೇನೆ. ನನಗೆ ಬಾತ್ಮಿ ಬಂದ ಮೇಲೆ ವಲಯ ಅರಣ್ಯಾಧಿಕಾರಿಗಳಿಗೆ ಪೋನ್ ಮೂಲಕ ಮಾಹಿತಿ ತಿಳಿಸಿರುತ್ತೇನೆ. ಮೇಲೆ ಹೇಳಿದ ವಿಷಯವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ನಾವು ಅವತ್ತು ಸ್ಥಳಕ್ಕೆ ಹೋದಾಗ ಸಮಯ 10-30 ಗಂಟೆ ಆಗಿತ್ತು. ನಾವು ಹೋದಾಗ ಸ್ವಲ್ಪ ಜನರು ಸ್ಥಳದಲ್ಲಿ ಚಿರತೆಯನ್ನು ನೋಡಲು ಸೇರಿದ್ದರು. ನಾವು ಸ್ಥಳಕ್ಕೆ ಹೋದಾಗು 70-80 ಜನರು ಸೇರಿದ್ದರು. ಅಲ್ಲಿ ಸುಮಾರು ಜನರು ಸೇರಿದ್ದರು ಅವರು ಚಿರತೆಯನ್ನು ನೋಡಲು ಬಂದಿದ್ದರು, ಆರೋಪಿತರನ್ನು ಬಿಟ್ಟು ಬೇರೆ ಯಾರು ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದಿಲ್ಲ. ಊರಿನ ಜನರನ್ನು ವಿಚಾರ ಮಾಡಿದಾಗ ಆರೋಪಿತರ ಹೆಸರು ವಿಳಾಸವನ್ನು ತಿಳಿಸಿರುತ್ತಾರೆ. ಆ ಊರಿನ ಜನರ ಹೆಸರು ನನಗೆ ಹೇಳಲು ಬರುವುದಿಲ್ಲ. ಆರೋಪಿತರು ಚಿರತೆಯನ್ನು ರಕ್ಷಿಸುವ ಕಾರ್ಯಾಚರಣೆಯಲ್ಲಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ನಾವು ಆರೋಪಿತರಿಗೆ ಹೇಳಿದರೂ ಅವರು ಚಿರತೆಯನ್ನು ರಕ್ಷಿಸಲು ಬಿಟ್ಟಿರುವುದಿಲ್ಲ. ಆರೋಪಿತರು ಚಿರತೆಯನ್ನು ಕೊಲ್ಲುವ ಕಾಲಕ್ಕೆ ತೆಗೆದ ಮೊಬೈಲ್ ಪೋನ್ ವಿಡಿಯೋ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆ ಸಮಯದಲ್ಲಿ ಸುಮಾರು ಜನರು ಸೇರಿರುತ್ತಾರೆ ಆರೋಪಿತರೆ ಚಿರತೆಯನ್ನು ಕೊಂದಿರುತ್ತಾರೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಚಿರತೆಯನ್ನು ರಕ್ಷಣೆ ಮಾಡುವ ಕಾರ್ಯಾಚರಣೆಯಲ್ಲಿ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಿಮಗೆ ಮತ್ತು ಅಧಿಕಾರಿಗಳಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ವಾಟೀ ಸವಾಲು: 3ನೇ ಆರೋಪಿ ಪರವಾಗಿ ಶ್ರೀ ಪಿ ಟಿ ಎನ್ ವಕೀಲರಿಂದ: -**

2. ಬಾತ್ಮಿ ಬಂದ ಸಮಯದಲ್ಲಿ ನಾನು ದೇವದುರ್ಗ ವಲಯ ಅರಣ್ಯಾಧಿಕಾರಿಗಳ ಕಚೇರಿಯಲ್ಲಿ ಇದ್ದೇನು. ಚಾಸಾ-1 ರವರ ಬೆಳಿಗ್ಗೆ 9-30 ಗಂಟೆ ಸಮಯದಲ್ಲಿ ಕಚೇರಿಯಲ್ಲಿ ಇದ್ದರು. ಆ ಸಮಯದಲ್ಲಿ 10 ಜನ ಸಿಬ್ಬಂದಿಯವರು ಇದ್ದರು. ನಾವು ಒಟ್ಟು 6-7 ಜನ ಕಮದಾಳ ಗ್ರಾಮದ ಗುಡ್ಡಕ್ಕೆ ಹೋಗಿರುತ್ತೇವೆ. ಅಲ್ಲಿಗೆ ಹೋದಾಗ ಸಮಯ ಬೆಳಿಗ್ಗೆ 9-45 ಗಂಟೆ ಆಗಿತ್ತು. ನಾನು, ಚಾಸಾ-1, ಚಾಸಾ- 6 ರಿಂದ 9 ರವರು ಸೇರಿ ಸ್ಥಳಕ್ಕೆ ಹೋಗಿರುತ್ತೇವೆ. ಚಾಸಾ-4 ಮತ್ತು 11 ರವರು ನಾವು ಹೋಗುವ ಪೂರ್ವದಲ್ಲಿ ಸ್ಥಳದಲ್ಲಿದ್ದರು. ಕಮದಾಳ ಊರಿನ ಬಾಜು ಗುಡ್ಡದ ಸ್ಥಳ ಬರುತ್ತದೆ. ನಾನು ಮತ್ತು ಸಿಬ್ಬಂದಿಯವರು ಸ್ಥಳಕ್ಕೆ ಹೋದಾಗ ಚಿರತೆ ನಮಗೆ ಕಾಣಿಸಿಕೊಂಡಿರುತ್ತದೆ. ಪೋಲಿಸ್ ಠಾಣೆಯಲ್ಲಿ ದಿನಾಂಕ: 20-10-2024 ರಂದು ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಪೋಲಿಸರು ಕರೆದಿದ್ದರಿಂದ ಹೇಳಿಕೆ ಕೊಟ್ಟಿರುತ್ತೇನೆ.

3. ಚಿರತೆಯು 3 ಜನರಿಗೆ ಎಷ್ಟು ಗಂಟೆಗೆ ದಾಳಿ ಮಾಡಿ ಗಾಯ ಪಡಿಸಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಗಾಯಾಳುಗಳನ್ನು ನಾನು ನೋಡಿ ವಿಚಾರಿಸಿರುತ್ತೇನೆ. ಗಾಯಾಳುಗಳ ಹೆಸರು ನನಗೆ ಹೇಳಲು ಬರುವುದಿಲ್ಲ. ಮರುದಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ವಿಚಾರಣೆ ಮಾಡಲು ಹೋಗಿ ಅಲ್ಲಿ ನೋಡಿರುತ್ತೇನೆ. ಕಮದಾಳ ಗ್ರಾಮದಲ್ಲಿ ಸಂಜೆ 4-40 ಗಂಟೆಯವರೆಗೆ ಇದ್ದೇವು. ಕಮದಾಳ ಗ್ರಾಮದಲ್ಲಿ ಚಿರತೆ ಹಿಡಿಯಲು ಏನೇನು ಕಾರ್ಯಾಚರಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು, ಜಾಲಹಳ್ಳಿಯಿಂದ ಚಿರತೆ ಹಿಡಿಯಲು ಬೋನ್ ತರಿಸಿರುತ್ತೇವೆ, ಹೊಸಪೇಟೆಯಿಂದ ಚಿರತೆ ಹಿಡಿಯುವ ವಿಶೇಷ ತಂಡದವರಿಗೆ ಮಾಹಿತಿಯನ್ನು ತಿಳಿಸಿ ಅವರು ಬರುವವರೆಗೆ ನಾವು ಕಾಯುಕೊಂಡಿದ್ದೇವು. ಆಗ ಸಮಯ ಮಧ್ಯಾಹ್ನ 12-30 ಗಂಟೆ ಆಗಿತ್ತು. ಹೊಸಪೇಟೆಯಿಂದ ಚಿರತೆ ಹಿಡಿಯುವ ವಿಶೇಷ ತಂಡದವರು ಸ್ಥಳಕ್ಕೆ ಬಂದಿರುವುದಿಲ್ಲ. ಈ ವಿಷಯವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ಸ್ಥಳದಲ್ಲಿ ಸುಮಾರು 1000 ದಷ್ಟು ಜನರು ಸೇರಿದ್ದರು. ಚಿರತೆಯು ಗುಡ್ಡದ ಮೇಲ್ಗಡೆ ಸ್ಥಳದಲ್ಲಿತ್ತು. ಸ್ಥಳದಲ್ಲಿ ನಮ್ಮ ಇಲಾಖೆಯ ಸಿಬ್ಬಂದಿಯವರು ಸುಮಾರು 13 ಜನರು ಇದ್ದರು ಮತ್ತು ಪೋಲಿಸರು ಇದ್ದರು. ನಾವು ಸ್ಥಳಕ್ಕೆ ಹೋದ ನಂತರ ಅರ್ದ ಗಂಟೆಯಲ್ಲಿ ಪೋಲಿಸರು ಅಲ್ಲಿಗೆ ಬಂದಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದೆ ಇರುವ 3ನೇ ಆರೋಪಿಯನ್ನು ಗುರುತಿಸಲು ನಿಮಗೆ ಆಗುತ್ತದೆಯೇ ಎಂದರೆ ಸಾಕ್ಷಿಯು ಕೊನೆಯದಾಗಿ ನಿಂತಿರುವ ವ್ಯಕ್ತಿ 3ನೇ ಆರೋಪಿ ಮಲ್ಲಣ್ಣ ಆಗಿರುತ್ತಾನೆ ಎಂದು ಗುರುತಿಸಿರುತ್ತಾನೆ ಆದರೆ ಸದರಿಯವರು 4ನೇ ಆರೋಪಿಯಾಗಿರುತ್ತಾರೆ.

4. ಘಟನೆಯ ಬಗ್ಗೆ ದಿನಾಂಕ: 30-07-2024 ರಂದು ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ನಿಮ್ಮ ಹೇಳಿಕೆಯಲ್ಲಿ ನಮ್ಮ ಸಿಬ್ಬಂದಿಯವರಾದ ಬಸವರಾಜ ಕಟ್ಟಿಮನಿ ಎಂದು ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ಆರೋಪಿ ರಂಗಪ್ಪ ಮತ್ತು ಉಳಿದ ಆರೋಪಿತರು ಚಾಸಾ-1ರವರ ಮತ್ತು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಆರೋಪಿ ರಂಗಪ್ಪನ ತಂದೆಯ ಹೆಸರು ನನಗೆ ನೆನಪಿರುವುದಿಲ್ಲ. ಆರೋಪಿತರು ಮಧ್ಯಾಹ್ನ 2-30 ರಿಂದ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಲು ಪ್ರಾರಂಭಿಸಿರುತ್ತಾರೆ. ಆ ಸಮಯದಲ್ಲಿ ಸ್ಥಳದಲ್ಲಿ ಪೋಲಿಸರು ಇದ್ದರು. ಅಲ್ಲಿದ್ದ ಪೋಲಿಸರಿಗೆ ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದು ತಿಳಿಸಿರುತ್ತೇವೆ. ಪೋಲಿಸರು ಆರೋಪಿತರಿಗೆ ಕರ್ತವ್ಯಕ್ಕೆ ಅಡ್ಡಿಪಡಿಸಬೇಡಿ ಎಂದು ತಿಳಿಸಿರುತ್ತಾರೆ. ಮೇಲೆ ಹೇಳಿದ ವಿಷಯಗಳನ್ನು ನನ್ನ ವಿಷಯವನ್ನು ತಿಳಿಸಿರುತ್ತೇನೆ. ನೀವು ಮೇಲೆ

ಹೇಳಿದಂತೆ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಿರತೆ ಹಿಡಿಯುವ ಕಾರ್ಯಾಚರಣೆಯ ವಿಡಿಯೋ ಮತ್ತು ಛಾಯಾ ಚಿತ್ರವನ್ನು ನೋಡಿದಾಗ ಆರೋಪಿತರ ಹೆಸರು ಗೊತ್ತಾಗಿರುತ್ತದೆ. ಯಾವ ದಿನಾಂಕದಂದು ಅವರ ಹೆಸರು ಗೊತ್ತಾಗಿದೆ ಎಂದು ನನಗೆ ದಿನಾಂಕ ನೆನಪಿರುವುದಿಲ್ಲ.

5. ಚಿರತೆಯ ಹೊಟ್ಟೆ ಮತ್ತು ಹಣೆಯ ಭಾಗದಲ್ಲಿ ಗಾಯಾಗಳಾಗಿತ್ತು. ನಿಖರವಾಗಿ ಯಾರು ಚಿರತೆಯನ್ನು ಕೊಂದಿರುತ್ತಾರೆ ಎಂದರೆ ಸಾಕ್ಷಿಯು 4 ಜನ ಆರೋಪಿತರು ಚಿರತೆಯನ್ನು ಕೊಂದಿರುತ್ತಾರೆ ನಿಖರವಾಗಿ ಯಾರು ಕೊಂದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಆರೋಪಿ ರಂಗಪ್ಪನ ಕೈಯಲ್ಲಿ ಭರ್ಚಿ ಇತ್ತು. ಉಳಿದ ಆರೋಪಿತರ ಕೈಯಲ್ಲಿ ಭರ್ಚಿ ಮತ್ತು ಬಡಿಗೆಗಳಿದ್ದವು ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಆ ಸಮಯದಲ್ಲಿ ಗುಡ್ಡದ ಮೇಲೆ ಇದ್ದೆ ಸರಿಯಾಗಿ ನೋಡಲು ಆಗಿರುವುದಿಲ್ಲ. ಚಿರತೆ ಇದ್ದ ಸ್ಥಳದಿಂದ ಅಂದಾಜು 50 ಮೀಟರ್ ದೂರದಲ್ಲಿ ನಾವು ಇದ್ದೇವು. ಅಲ್ಲಿ ಸಾವಿರಕ್ಕೂ ಹೆಚ್ಚು ಜನರು ಸೇರಿರುವದರಿಂದ ಚಿರತೆಯನ್ನು ಯಾರು ಯಾರು ಹೊಡೆದಿರುತ್ತಾರೆ ನಿಮಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಚಿರತೆಯು ಸಂಜೆ 4-00 ಗಂಟೆ ಮೇಲ್ಪಟ್ಟು ಮರಣ ಹೊಂದಿರುತ್ತದೆ. ಚಿರತೆ ಸತ್ತ ನಂತರ ಎಷ್ಟು ಗಂಟೆಗೆ ಹೋಗಿ ನೋಡಿದ್ದೇನೆಂದು ನನಗೆ ನೆನಪಿಲ್ಲ. ಚಿರತೆಯ ಮೃತ ದೇಹವನ್ನು ದೇವದುರ್ಗ ಅರಣ್ಯ ಕಚೇರಿಗೆ ಸಂಜೆ 6-00 ಗಂಟೆಗೆ ತಂದಿರುತ್ತೇವೆ. 4 ಜನ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಾನು ಮತ್ತು ಚಾಸಾ-1 ರವರು ಘಟನೆ ಆದ ದಿನ ದೂರು ಕೊಡಲು ಹೋಗಿರುವುದಿಲ್ಲ. ಮರು ದಿನ ಸಂಜೆ 4-00 ಗಂಟೆ ಸುಮಾರಿಗೆ ಹೋಗಿರುತ್ತೇವೆ. ಠಾಣೆಯಲ್ಲಿ 1 ತಾಸಿನವರೆಗೆ ನಾವು ಇದ್ದೇವು. ದೂರನ್ನು ಮೌಖಿಕವಾಗಿ ಚಾಸಾ-1 ರವರು ಪೋಲಿಸರಿಗೆ ತಿಳಿಸಿರುತ್ತಾರೆ. ದೂರು ಕೊಟ್ಟ ದಿನಾಂಕದಂದು ನನ್ನ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಚಿರತೆಯನ್ನು ಕೊಂದ ಬಗ್ಗೆ ಮಾದ್ಯಮದಲ್ಲಿ ಮತ್ತು ಪತ್ರಿಕೆಯಲ್ಲಿ ನಿಮ್ಮ ಕರ್ತವ್ಯ ಲೋಪದಿಂದ ಜನಾಕ್ರೋಶದಿಂದ ಬಂದಿರುತ್ತದೆ ಎಂದರೆ ಸರಿ. ಘಟನೆ ಬಗ್ಗೆ ಅರಣ್ಯ ಇಲಾಖೆಯ ಸಚಿವರು ನಿಮ್ಮ ಮತ್ತು ಸಿಬ್ಬಂದಿಯವರ ಮೇಲೆ ಕ್ರಮ ಜರುಗಿಸುವಂತೆ ತನಿಖೆ ಮಾಡಲು ಆದೇಶ ನೀಡಿರುತ್ತಾರೆ ಎಂದರೆ ಸರಿ. ಇದೇ ಕಾರಣಕ್ಕಾಗಿ ಚಾಸಾ-1 ರವರು ಸುಳ್ಳು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಚಿರತೆಯನ್ನು ನೋಡಲು ಬಂದಿದ್ದವರ ಮೇಲೆ ಸುಳ್ಳು ದೂರನ್ನು ಕೊಟ್ಟಿದ್ದಿರಾ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ವಿರುದ್ದ ತನಿಖೆಗೆ ಆದೇಶ ಮಾಡಿದ್ದರಿಂದ ಅದರಿಂದ ತಪ್ಪಿಸಿಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ದೂರು

ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಚಿರತೆ ಹಿಡಿಯುವ ಕಾರ್ಯಾಚರಣೆಯಲ್ಲಿ ನಿಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಮತ್ತು ಅವಾಚ್ಯ ಶಬ್ದಗಳಿಂದ ಬೈದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯ ಎಸಗಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಪಾಟೀ ಸವಾಲು: 2 ಮತ್ತು 4ನೇ ಆರೋಪಿ ಪರ ವಕೀಲರಿಂದ: -**

ಆರೋಪಿ ನಂಬರ್ 1 ಮತ್ತು 3ನೇ ಪರ ವಕೀಲರ ಪಾಟೀಸವಾಲು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿಸಲಾಯಿತು.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

**Government of Karnataka**
**Deposition Sheet (R.P.N.57) Form 4 Criminal**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 534/2025 |

ದಿನಾಂಕ 30-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 4 ಪ್ರಾಸಾಃ 3

| | |
|---|---|
| ಹೆಸರು | ಹನುಮೇಶ ಯಾದವ |
| ತಂದೆಯ ಹೆಸರು | ವೆಂಕೋಬ |
| ವಯಸ್ಸು | 31 ವರ್ಷ |
| ಉದ್ಯೋಗ | ಉಪವಲಯ ಅರಣ್ಯಾಧಿಕಾರಿಗಳು ಮಸರಕಲ್ ಶಾಖೆ |
| ವಾಸಸ್ಥಳ | ಮುದಗಲ್ |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ -**

ನಾನು ಸುಮಾರು 2 ವರ್ಷದಿಂದ ಉಪವಲಯ ಅರಣ್ಯಾಧಿಕಾರಿಗಳು ಎಂದು ಮಸರಕಲ್ ಶಾಖೆಯಲ್ಲಿ ಕೆಲಸ ಮಾಡಿಕೊಂಡಿದ್ದೇನೆ.

ದಿನಾಂಕ: 07-07-2024 ರಂದು ಬೆಳಿಗ್ಗೆ 9-30 ಗಂಟೆಗೆ ನಾನು ಕರ್ತವ್ಯದಲ್ಲಿದ್ದಾಗ, ನನಗೆ ಪೋನ್ ಕರೆ ಬಂದು ಮಾಹಿತಿ ಬಂದಿದ್ದೇನೆಂದರೆ ದೇವದುರ್ಗ ತಾಲೂಕಿನ ಕಮದಾಳ ಗ್ರಾಮದ ಗುಡ್ಡದಲ್ಲಿ ಚಿರತೆ ಕಾಣಿಸಿಕೊಂಡಿದ್ದು, ಸದರಿ ಚಿರತೆಯು 3 ಜನರಿಗೆ ದಾಳಿ ಮಾಡಿ ಗಾಯ ಮಾಡಿದ್ದು, ಮಾಹಿತಿ ಬಂದ ಮೇರೆಗೆ ನಾನು ಮತ್ತು ಸಿಬ್ಬಂದಿಯವರಾದ ಚಾಸಾ-1, 5 ರಿಂದ 13 ರವರು ಚಿರತೆ ಕಾರ್ಯಾಚರಣೆಯಲ್ಲಿದ್ದಾಗ, ಸಂಜೆ 4-30 ಗಂಟೆ ಸುಮಾರಿಗೆ ಕಮದಾಳ ಗ್ರಾಮದಲ್ಲಿ ಚಿರತೆ ಕಾರ್ಯಾಚರಣೆಯಲ್ಲಿದ್ದಾಗ, ಅಲ್ಲಿದ್ದ ಜನರಲ್ಲಿ ಯಂಕಪ್ಪ, ರಂಗಪ್ಪ, ಮಲ್ಲಣ್ಣ ಮತ್ತು ಸೋಮರಡ್ಡಿ ಇವರು ನಮಗೆ ಅವಾಚ್ಯ ಶಬ್ದಗಳಿಂದ ಬೈದು ನೀವು ಯಾವ ಅರಣ್ಯಾಧಿಕಾರಿಗಳು ನೀವು ಇಷ್ಟೆಲ್ಲಾ ಅಧಿಕಾರಿಗಳು ಇದ್ದರು ಒಂದು ಚಿರತೆಯನ್ನು ಹಿಡಿಯುವುದಕ್ಕೆ ಆಗುವುದಿಲ್ಲ ಎಂದು ಬೈದು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಚಿರತೆಯನ್ನು ರಕ್ಷಣೆ ಮಾಡಲು ನಮಗೆ ಆರೋಪಿತರು ಬಿಟ್ಟಿರುವುದಿಲ್ಲ. ಚಿರತೆಯನ್ನು ಹೊಡೆದು ಕೊಲೆ ಮಾಡಿರುತ್ತಾರೆ. ಸಾಕ್ಷಿದಾರರು ಮೃತ ಚಿರತೆಯ ಎರಡು ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ಕ್ರಮವಾಗಿ ನಿ ಪಿ 4 ಮತ್ತು 5 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿತರನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ಈ ಬಗ್ಗೆ ನಾನು ತನಿಖಾಧಿಕಾರಿಗಳಿಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲು: 1ನೇ ಆರೋಪಿ ಪರವಾಗಿ ಶ್ರೀ ಎಸ್ ಪಿ ವಕೀಲರಿಂದ:**

1. ಬಾತ್ಮಿ ಬಂದಾಗ ನಾನು ಮಸರಕಲ್ ವಲಯದ ಕಾಕರಗಲ್ ಗ್ರಾಮದಲ್ಲಿ ಕರ್ತವ್ಯದಲ್ಲಿದ್ದೇನು. ಬಾತ್ಮಿ ಬಂದಾಗ ನಾನೊಬ್ಬನೆ ಇದ್ದೇನು. ಬಾತ್ಮಿ ಬಂದ ನಂತರ ನಾನು ಕೊಪ್ಪರ ಕ್ರಾಸ್ ಹತ್ತಿರ

ಬಂದಿರುತ್ತೇನೆ ಅಲ್ಲಿಂದ ಅಧಿಕಾರಿಗಳೊಂದಿಗೆ ಜೀಪ್ ನಲ್ಲಿ ಸ್ಥಳಕ್ಕೆ ಹೋಗಿರುತ್ತೇನೆ. ನನಗೆ ಬಾತ್ಮಿ ಬಂದ ಮೇಲೆ ವಲಯ ಅರಣ್ಯಾಧಿಕಾರಿಗಳಿಗೆ ಫೋನ್ ಮೂಲಕ ಮಾಹಿತಿ ತಿಳಿಸಿರುತ್ತೇನೆ. ಮೇಲೆ ಹೇಳಿದ ವಿಷಯವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ನಾವು ಅವತ್ತು ಸ್ಥಳಕ್ಕೆ ಹೋದಾಗ ಸಮಯ 10-30 ಗಂಟೆ ಆಗಿತ್ತು. ನಾವು ಹೋದಾಗ ಸ್ವಲ್ಪ ಜನರು ಸ್ಥಳದಲ್ಲಿ ಚಿರತೆಯನ್ನು ನೋಡಲು ಸೇರಿದ್ದರು. ನಾವು ಸ್ಥಳಕ್ಕೆ ಹೋದಾಗು 70-80 ಜನರು ಸೇರಿದ್ದರು. ಅಲ್ಲಿ ಸುಮಾರು ಜನರು ಸೇರಿದ್ದರು ಅವರು ಚಿರತೆಯನ್ನು ನೋಡಲು ಬಂದಿದ್ದರು, ಆರೋಪಿತರನ್ನು ಬಿಟ್ಟು ಬೇರೆ ಯಾರು ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದಿಲ್ಲ. ಊರಿನ ಜನರನ್ನು ವಿಚಾರ ಮಾಡಿದಾಗ ಆರೋಪಿತರ ಹೆಸರು ವಿಳಾಸವನ್ನು ತಿಳಿಸಿರುತ್ತಾರೆ. ಆ ಊರಿನ ಜನರ ಹೆಸರು ನನಗೆ ಹೇಳಲು ಬರುವುದಿಲ್ಲ. ಆರೋಪಿತರು ಚಿರತೆಯನ್ನು ರಕ್ಷಿಸುವ ಕಾರ್ಯಾಚರಣೆಯಲ್ಲಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ನಾವು ಆರೋಪಿತರಿಗೆ ಹೇಳಿದರೂ ಅವರು ಚಿರತೆಯನ್ನು ರಕ್ಷಿಸಲು ಬಿಟ್ಟಿರುವುದಿಲ್ಲ. ಆರೋಪಿತರು ಚಿರತೆಯನ್ನು ಕೊಲ್ಲುವ ಕಾಲಕ್ಕೆ ತೆಗೆದ ಮೊಬೈಲ್ ಫೋನ್ ವಿಡಿಯೋ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆ ಸಮಯದಲ್ಲಿ ಸುಮಾರು ಜನರು ಸೇರಿರುತ್ತಾರೆ ಆರೋಪಿತರೆ ಚಿರತೆಯನ್ನು ಕೊಂದಿರುತ್ತಾರೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಚಿರತೆಯನ್ನು ರಕ್ಷಣೆ ಮಾಡುವ ಕಾರ್ಯಾಚರಣೆಯಲ್ಲಿ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಿಮಗೆ ಮತ್ತು ಅಧಿಕಾರಿಗಳಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ವಾಟೀ ಸವಾಲು: 3ನೇ ಆರೋಪಿ ಪರವಾಗಿ ಶ್ರೀ ಪಿ ಟಿ ಎನ್ ವಕೀಲರಿಂದ: -**

2. ಬಾತ್ಮಿ ಬಂದ ಸಮಯದಲ್ಲಿ ದೇವದುರ್ಗ ವಲಯ ಅರಣ್ಯಾಧಿಕಾರಿಗಳು ಇದ್ದರು. ಅವರಿಗೂ ಮಾಹಿತಿ ಬಂದಿರುತ್ತದೆ ಎಂದು ನನಗೆ ತಿಳಿಸಿರುತ್ತಾರೆ. ನಾನು ಚಾಸಾ-1 ರವರಿಗೆ ಫೋನ್ ಮಾಡಿ ಮಾಹಿತಿ ತಿಳಿಸಿದಾಗ, ಅವರಿಗೂ ಮಾಹಿತಿ ಬಂದಿರುತ್ತದೆ ಎಂದು ನನಗೆ ತಿಳಿಸಿರುತ್ತಾರೆ. ಚಾಸಾ-1 ರವರು ನಮ್ಮ ಮೇಲಾಧಿಕಾರಿಗಳಾಗಿರುತ್ತಾರೆ. ಕಾಕರಗಲ್ ದಿಂದ ದೇವದುರ್ಗ ಕ್ಕೆ 18 ಕಿ ಮಿ ದೂರ ಆಗುತ್ತದೆ. ನಾನು ಕೊಪ್ಪರ ಕ್ರಾಸ್ ಹತ್ತಿರ ಬಂದಾಗ ಸಮಯ ಬೆಳಿಗ್ಗೆ 10-00 ಗಂಟೆ ಆಗಿತ್ತು ನನ್ನ ಜೊತೆ ನಮ್ಮ ವಾಚರ ಬಸವರಾಜ ಎನ್ನುವವರು ಇದ್ದರು. ಕೊಪ್ಪರ ಕ್ರಾಸ್ ಹತ್ತಿರ ನಾವು ಸುಮಾರು 10-15 ನಿಮಿಷ ಇದ್ದೇವು. ಚಾಸಾ-1 ರವರು ದೇವದುರ್ಗ ತಾಲೂಕಿನ ತಹಶೀಲ್ದಾರರವರಿಗೆ ಭೇಟಿಯಾಗಿ ಬರುವುದಾಗಿ ತಿಳಿಸಿರುತ್ತಾರೆ. ಕೊಪ್ಪರ ಕ್ರಾಸ್ ಹತ್ತಿರ ಚಾಸಾ-1 ರವರು ಬಂದಾಗ ಬೆಳಿಗ್ಗೆ 10-30 ಗಂಟೆ ಆಗಿತ್ತು. ಆ ಸಮಯದಲ್ಲಿ 10 ಜನ ಸಿಬ್ಬಂದಿಯವರು ಇದ್ದರು. ನಾವು ಒಟ್ಟು 6-7 ಜನ ಕಮದಾಳ ಗ್ರಾಮದ

ಗುಡ್ಡಕ್ಕೆ ಹೋಗಿರುತ್ತೇವೆ. ಅಲ್ಲಿಗೆ ಹೋದಾಗ ಸಮಯ ಬೆಳಿಗ್ಗೆ 10-45 ಗಂಟೆ ಆಗಿತ್ತು. ನಾನು, ಚಾಸಾ-1, ಚಾಸಾ-7 ರಿಂದ 9 ರವರು ಸೇರಿ ಸ್ಥಳಕ್ಕೆ ಹೋಗಿರುತ್ತೇವೆ. ಕಮದಾಳ ಊರಿನ ಬಾಜು ಗುಡ್ಡದ ಸ್ಥಳ ಬರುತ್ತದೆ. ನಾನು ಮತ್ತು ಸಿಬ್ಬಂದಿಯವರು ಸ್ಥಳಕ್ಕೆ ಹೋದಾಗ ಚಿರತೆ ನಮಗೆ ಕಾಣಿಸಿಕೊಂಡಿರುತ್ತದೆ.

3. ಚಿರತೆಯು 3 ಜನರಿಗೆ ಎಷ್ಟು ಗಂಟೆಗೆ ದಾಳಿ ಮಾಡಿ ಗಾಯ ಪಡಿಸಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಗಾಯಾಳುಗಳನ್ನು ನಾನು ನೋಡಿ ವಿಚಾರಿಸಿರುತ್ತೇನೆ. ಗಾಯಾಳುಗಳ ಹೆಸರು ನನಗೆ ಹೇಳಲು ಬರುವುದಿಲ್ಲ. ಮರುದಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ವಿಚಾರಣೆ ಮಾಡಲು ಹೋಗಿ ಅಲ್ಲಿ ನೋಡಿರುತ್ತೇನೆ. ಕಮದಾಳ ಗ್ರಾಮದಲ್ಲಿ ಸಂಜೆ 4-40 ಗಂಟೆಯವರೆಗೆ ಇದ್ದೇವು. ಕಮದಾಳ ಗ್ರಾಮದಲ್ಲಿ ಚಿರತೆ ಹಿಡಿಯಲು ಏನೇನು ಕಾರ್ಯಾಚರಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು, ಜಾಲಹಳ್ಳಿಯಿಂದ ಚಿರತೆ ಹಿಡಿಯಲು ಬೋನ್ ತರಿಸಿರುತ್ತೇವೆ, ಹೊಸಪೇಟೆಯಿಂದ ಚಿರತೆ ಹಿಡಿಯುವ ವಿಶೇಷ ತಂಡದವರಿಗೆ ಮಾಹಿತಿಯನ್ನು ತಿಳಿಸಿ ಅವರು ಬರುವವರೆಗೆ ನಾವು ಕಾಯುಕೊಂಡಿದ್ದೇವು. ಆಗ ಸಮಯ ಮಧ್ಯಾಹ್ನ 12-30 ಗಂಟೆ ಆಗಿತ್ತು. ಹೊಸಪೇಟೆಯಿಂದ ಚಿರತೆ ಹಿಡಿಯುವ ವಿಶೇಷ ತಂಡದವರು ಸ್ಥಳಕ್ಕೆ ಬಂದಿರುವುದಿಲ್ಲ. ಈ ವಿಷಯವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ಸ್ಥಳದಲ್ಲಿ ಸುಮಾರು 1000 ದಷ್ಟು ಜನರು ಸೇರಿದ್ದರು. ಚಿರತೆಯು ಗುಡ್ಡದ ಮೇಲ್ಗಡೆ ಸ್ಥಳದಲ್ಲಿತ್ತು. ಸ್ಥಳದಲ್ಲಿ ನಮ್ಮ ಇಲಾಖೆಯ ಸಿಬ್ಬಂದಿಯವರು ಸುಮಾರು 13 ಜನರು ಇದ್ದರು ಮತ್ತು ಪೋಲಿಸರು ಇದ್ದರು. ನಾವು ಸ್ಥಳಕ್ಕೆ ಹೋದ ನಂತರ ಅರ್ದ ಗಂಟೆಯಲ್ಲಿ ಪೋಲಿಸರು ಅಲ್ಲಿಗೆ ಬಂದಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದೆ ಇರುವ 3ನೇ ಆರೋಪಿಯನ್ನು ಗುರುತಿಸಲು ನಿಮಗೆ ಆಗುತ್ತದೆಯೇ ಎಂದರೆ ಸಾಕ್ಷಿಯು ಕೊನೆಯದಾಗಿ ನಿಂತಿರುವ ವ್ಯಕ್ತಿ 3ನೇ ಆರೋಪಿ ಮಲ್ಲಣ್ಣ ಆಗಿರುತ್ತಾನೆ ಎಂದು ಗುರುತಿಸಿರುತ್ತಾನೆ ಆದರೆ ಸದರಿಯವರು 4ನೇ ಆರೋಪಿಯಾಗಿರುತ್ತಾರೆ.

4. ಘಟನೆಯ ಬಗ್ಗೆ ದಿನಾಂಕ: 30-07-2024 ರಂದು ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ನಿಮ್ಮ ಹೇಳಿಕೆಯಲ್ಲಿ ನಮ್ಮ ಸಿಬ್ಬಂದಿಯವರಾದ ಬಸವರಾಜ ಕಟ್ಟಿಮನಿ ಎಂದು ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ಆರೋಪಿ ರಂಗಪ್ಪ ಮತ್ತು ಉಳಿದ ಆರೋಪಿತರು ಚಾಸಾ-1ರವರ ಮತ್ತು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಆರೋಪಿ ರಂಗಪ್ಪನ ತಂದೆಯ ಹೆಸರು ನನಗೆ ನೆನಪಿರುವುದಿಲ್ಲ. ಆರೋಪಿತರು ಮಧ್ಯಾಹ್ನ 2-30 ರಿಂದ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಲು ಪ್ರಾರಂಭಿಸಿರುತ್ತಾರೆ. ಆ

ಸಮಯದಲ್ಲಿ ಸ್ಥಳದಲ್ಲಿ ಪೋಲಿಸರು ಇದ್ದರು. ಅಲ್ಲಿದ್ದ ಪೋಲಿಸರಿಗೆ ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದು ತಿಳಿಸಿರುತ್ತೇವೆ. ಪೋಲಿಸರು ಆರೋಪಿತರಿಗೆ ಕರ್ತವ್ಯಕ್ಕೆ ಅಡ್ಡಿಪಡಿಸಬೇಡಿ ಎಂದು ತಿಳಿಸಿರುತ್ತಾರೆ. ಮೇಲೆ ಹೇಳಿದ ವಿಷಯಗಳನ್ನು ನನ್ನ ವಿಷಯವನ್ನು ತಿಳಿಸಿರುತ್ತೇನೆ. ನೀವು ಮೇಲೆ ಹೇಳಿದಂತೆ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಿರತೆ ಹಿಡಿಯುವ ಕಾರ್ಯಾಚರಣೆಯ ವಿಡಿಯೋ ಮತ್ತು ಛಾಯಾ ಚಿತ್ರವನ್ನು ನೋಡಿದಾಗ ಆರೋಪಿತರ ಹೆಸರು ಗೊತ್ತಾಗಿರುತ್ತದೆ. ಯಾವ ದಿನಾಂಕದಂದು ಅವರ ಹೆಸರು ಗೊತ್ತಾಗಿದೆ ಎಂದು ನನಗೆ ದಿನಾಂಕ ನೆನಪಿರುವುದಿಲ್ಲ.

5. ಚಿರತೆಯ ಹೊಟ್ಟೆ ಮತ್ತು ಹಣೆಯ ಭಾಗದಲ್ಲಿ ಗಾಯಾಗಳಾಗಿತ್ತು. ನಿಖರವಾಗಿ ಯಾರು ಚಿರತೆಯನ್ನು ಕೊಂದಿರುತ್ತಾರೆ ಎಂದರೆ ಸಾಕ್ಷಿಯು 4 ಜನ ಆರೋಪಿತರು ಚಿರತೆಯನ್ನು ಕೊಂದಿರುತ್ತಾರೆ ನಿಖರವಾಗಿ ಯಾರು ಕೊಂದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಆರೋಪಿ ರಂಗಪ್ಪನ ಕೈಯಲ್ಲಿ ಭರ್ಚಿ ಇತ್ತು. ಉಳಿದ ಆರೋಪಿತರ ಕೈಯಲ್ಲಿ ಭರ್ಚಿ ಮತ್ತು ಬಡಿಗೆಗಳಿದ್ದವು ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಆ ಸಮಯದಲ್ಲಿ ಗುಡ್ಡದ ಮೇಲೆ ಇದ್ದೆ ಸರಿಯಾಗಿ ನೋಡಲು ಆಗಿರುವುದಿಲ್ಲ. ಚಿರತೆ ಇದ್ದ ಸ್ಥಳದಿಂದ ಅಂದಾಜು 50 ಮೀಟರ್ ದೂರದಲ್ಲಿ ನಾವು ಇದ್ದೇವು. ಅಲ್ಲಿ ಸಾವಿರಕ್ಕೂ ಹೆಚ್ಚು ಜನರು ಸೇರಿರುವದರಿಂದ ಚಿರತೆಯನ್ನು ಯಾರು ಯಾರು ಹೊಡೆದಿರುತ್ತಾರೆ ನಿಮಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಚಿರತೆಯು ಸಂಜೆ 4-00 ಗಂಟೆ ಮೇಲ್ಪಟ್ಟು ಮರಣ ಹೊಂದಿರುತ್ತದೆ. ಚಿರತೆ ಸತ್ತ ನಂತರ ಎಷ್ಟು ಗಂಟೆಗೆ ಹೋಗಿ ನೋಡಿದ್ದೇನೆಂದು ನನಗೆ ನೆನಪಿಲ್ಲ. ಚಿರತೆಯ ಮೃತ ದೇಹವನ್ನು ದೇವದುರ್ಗ ಅರಣ್ಯ ಕಚೇರಿಗೆ ಸಂಜೆ 6-00 ಗಂಟೆಗೆ ತಂದಿರುತ್ತೇವೆ. 4 ಜನ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಾನು ಮತ್ತು ಚಾಸಾ-1 ರವರು ಘಟನೆ ಆದ ದಿನ ದೂರು ಕೊಡಲು ಹೋಗಿರುವುದಿಲ್ಲ. ಮರು ದಿನ ಸಂಜೆ 4-00 ಗಂಟೆ ಸುಮಾರಿಗೆ ಹೋಗಿರುತ್ತೇವೆ. ಠಾಣೆಯಲ್ಲಿ 1 ತಾಸಿನವರೆಗೆ ನಾವು ಇದ್ದೇವು. ದೂರನ್ನು ಮೌಖಿಕವಾಗಿ ಚಾಸಾ-1 ರವರು ಪೋಲಿಸರಿಗೆ ತಿಳಿಸಿರುತ್ತಾರೆ. ದೂರು ಕೊಟ್ಟ ದಿನಾಂಕದಂದು ನನ್ನ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಚಿರತೆಯನ್ನು ಕೊಂದ ಬಗ್ಗೆ ಮಾದ್ಯಮದಲ್ಲಿ ಮತ್ತು ಪತ್ರಿಕೆಯಲ್ಲಿ ನಿಮ್ಮ ಕರ್ತವ್ಯ ಲೋಪದಿಂದ ಜನಾಕ್ರೋಶದಿಂದ ಬಂದಿರುತ್ತದೆ ಎಂದರೆ ಸರಿ. ಘಟನೆ ಬಗ್ಗೆ ಅರಣ್ಯ ಇಲಾಖೆಯ ಸಚಿವರು ನಿಮ್ಮ ಮತ್ತು ಸಿಬ್ಬಂದಿಯವರ

ಮೇಲೆ ಕ್ರಮ ಜರುಗಿಸುವಂತೆ ತನಿಖೆ ಮಾಡಲು ಆದೇಶ ನೀಡಿರುತ್ತಾರೆ ಎಂದರೆ ಸರಿ. ಇದೇ ಕಾರಣಕ್ಕಾಗಿ ಚಾಸಾ-1 ರವರು ಸುಳ್ಳು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಚಿರತೆಯನ್ನು ನೋಡಲು ಬಂದಿದ್ದವರ ಮೇಲೆ ಸುಳ್ಳು ದೂರನ್ನು ಕೊಟ್ಟಿದ್ದಿರಾ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ವಿರುದ್ದ ತನಿಖೆಗೆ ಆದೇಶ ಮಾಡಿದ್ದರಿಂದ ಅದರಿಂದ ತಪ್ಪಿಸಿಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ದೂರು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಚಿರತೆ ಹಿಡಿಯುವ ಕಾರ್ಯಾಚರಣೆಯಲ್ಲಿ ನಿಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಮತ್ತು ಅವಾಚ್ಯ ಶಬ್ದಗಳಿಂದ ಬೈದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯ ಎಸಗಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಪಾಟೀ ಸವಾಲು: 2 ಮತ್ತು 4ನೇ ಆರೋಪಿ ಪರ ವಕೀಲರಿಂದ: -**

ಆರೋಪಿ ನಂಬರ್ 1 ಮತ್ತು 3ನೇ ಪರ ವಕೀಲರ ಪಾಟೀಸವಾಲು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿಸಲಾಯಿತು.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

# Government of Karnataka
# Deposition Sheet (R.P.N.57) Form 4 Criminal
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 534/2025 |

ದಿನಾಂಕ 30-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 2 ಪ್ರಾಸಾಃ 1

| | |
|---|---|
| ಹೆಸರು | ಹಸನ |
| ತಂದೆಯ ಹೆಸರು | ಚಂದಾಸಾಬ |
| ವಯಸ್ಸು | 30 ವರ್ಷ |
| ಉದ್ಯೋಗ | ಫಾರೆಸ್ಟ್ ವಾಚರ್ ಗಾಣಧಾಳ |
| ವಾಸಸ್ಥಳ | ಗಾಣಧಾಳ ತಾ: ದೇವದುರ್ಗ |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ -**

ನಾನು ಸುಮಾರು 15 ವರ್ಷದಿಂದ ಫಾರೆಸ್ಟ್ ವಾಚರ್ ಆಗಿ ಕೆಲಸ ಮಾಡಿಕೊಂಡಿದ್ದೇನೆ.

ಚಾಸಾ-1 ರವರು ಆರ್ ಎಫ್ ಓ ಅಂತಾ ಕೆಲಸ ಮಾಡುತ್ತಿದ್ದರು. ಚಾಸಾ-3 ರಿಂದ 13 ರವರು ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ ನನಗೆ ಪರಿಚಯ ಇರುತ್ತಾರೆ. ಚಾಸಾ-14 ರಿಂದ 16 ರವರು ನನಗೆ ಪರಿಚಯ ಇರುತ್ತಾರೆ. ಆರೋಪಿತರ ಪರಿಚಯ ಇಲ್ಲ. ಸಾಕ್ಷಿಯು ಗುನ್ಹೆ ಜಾಗದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ:ಪಿ-1 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ:ಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ: 09-07-2024 ರಂದು ಕಮದಾಳ ಗ್ರಾಮದ ಗುಡ್ಡದ ಹತ್ತಿರ ಮಾಡಿರುತ್ತೇನೆ. ಕಮದಾಳ ಗ್ರಾಮದ ಗುಡ್ಡದಲ್ಲಿ ಚಿರತೆ ಕಾಣಿಸಿಕೊಂಡಿತ್ತು, ಚಿರತೆ ಹಿಡಿಯುವ ಕಾರ್ಯಾಚರಣೆಯಲ್ಲಿ ಅವಶ್ಯಕವಾಗಿರುವ ಭೋನ್ ಮತ್ತು ಬಲೆಯನ್ನು ತೆಗೆದುಕೊಂಡು ಹೋಗಿರುತ್ತೇವೆ. ಆ ಸಮಯದಲ್ಲಿ ಚಿರತೆಯನ್ನು ಊರಿನ ಜನರು ಕೊಂದಿರುತ್ತಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ಗುನ್ಹೆಸ್ಥಳಕ್ಕೆ ಹೋದಾಗ ಅಲ್ಲಿದ್ದ ಊರಿನ ಜನರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಹಿಂದೆ ಸರಿಸಿರುತ್ತಾರೆ. ಈ ಕುರಿತು ಪಂಚನಾಮೆ ಬೆಳಿಗ್ಗೆ 9-00 ಗಂಟೆಯಿಂದ 10-00 ಗಂಟೆಯವರೆಗೆ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಮಾಡುವಾಗ ಎರಡು ಛಾಯಾ ಚಿತ್ರಗಳನ್ನು ತೆಗೆಸಿರುತ್ತಾರೆ. ಸಾಕ್ಷಿದಾರರು ಸದರಿ ಛಾಯಾ ಚಿತ್ರದಲ್ಲಿ ತನ್ನನ್ನು ಮತ್ತು ಚಾಸಾ-3 ಹಾಗೂ ಪೋಲಿಸ್

ಅಧಿಕಾರಿಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ಕ್ರಮವಾಗಿ ನಿ ಪಿ 2 ಮತ್ತು 3 ಎಂದು ಗುರುತಿಸಲಾಯಿತು.

**ವಾಟೀ ಸವಾಲು: 1ನೇ ಆರೋಪಿ ಪರವಾಗಿ ಶ್ರೀ ಎಸ್ ಪಿ ವಕೀಲರಿಂದ:**

1. ಚಾಸಾ-1 ರವರು ನಿಮ್ಮ ಮೇಲಾಧಿಕಾರಿಗಳಾಗಿರುತ್ತಾರೆ ಎಂದರೆ ಸರಿ. ಅವರು ಹೇಳಿದ ಕೆಲಸವನ್ನು ನೀವು ಮಾಡಬೇಕಾಗುತ್ತದೆ ಎಂದರೆ ಸರಿ. ಪಂಚನಾಮೆ ಮಾಡುವ ಕಾಲಕ್ಕೆ ನನ್ನ ಜೊತೆಗೆ ಚಾಸಾ-1, 3 ಮತ್ತು ಪೋಲಿಸರು ಇದ್ದರು. ಪೋಲಿಸರ ಹೆಸರು ನನಗೆ ಹೇಳಲು ಬರುವುದಿಲ್ಲ. ಫಾರೆಸ್ಟ್ ಕಚೇರಿಯಿಂದ ಕಮದಾಳ ಗುನ್ಹೆ ಸ್ಥಳ ಸುಮಾರು 6-7 ಕಿ ಮಿ ದೂರ ಆಗುತ್ತದೆ. ಅದು ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋದಾಗ ಸಮಯ ಬೆಳಿಗ್ಗೆ 9-00 ಗಂಟೆ ಆಗಿತ್ತು. ಪಂಚನಾಮೆ ಮಾಡುವ ಕಾಲಕ್ಕೆ ನಾನು ಚಾಸಾ-1, 3 ಮತ್ತು ಪೋಲಿಸರನ್ನು ಹೊರತುಪಡಿಸಿ ಊರಿನ ಜನರು ಅಲ್ಲಿ ಇರಲಿಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ಏನೂ ವಸ್ತು ಜಪ್ತಿ ಮಾಡಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಪಂಚನಾಮೆ ಮಾಡಿದ ಸ್ಥಳದ ಚಕ್‌ಬಂದಿ ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಯನ್ನು ಚಿರತೆ ಕೊಂದಿದ ಸಂಬಂಧ ಮಾಡಿರುತ್ತಾರೆ. ಚಿರತೆ ಸ್ಥಳದಲ್ಲಿ ಇರಲಿಲ್ಲ. ದಿನಾಂಕ: 09-07-2024 ರಂದು ಬೆಳಿಗ್ಗೆ 9-00 ರಿಂದ 10-00 ಗಂಟೆಯವರೆಗೆ ನಿಮ್ಮ ಮತ್ತು ಚಾಸಾ-3 ರವರ ಸಮಕ್ಷಮ ಕಮದಾಳ ಗ್ರಾಮದ ಗುಡ್ಡದಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ವಾಟೀ ಸವಾಲು: 2ನೇ ಆರೋಪಿ ಪರವಾಗಿ ಶ್ರೀ ಎಸ್ ಆರ್ ವಕೀಲರಿಂದ: -**

ಪಂಚನಾಮೆ ಮಾಡುವ ಕಾಲಕ್ಕೆ ನಾನು ಕಮದಾಳ ಗ್ರಾಮಕ್ಕೆ ಹೋಗಿದ್ದೇನು. ಪಂಚನಾಮೆ ಮಾಡಿದ ಸ್ಥಳದಲ್ಲಿ ಕಟ್ಟಿಗೆ, ಕಲ್ಲುಗಳು ಬಿದ್ದಿರುವ ಬಗ್ಗೆ ನನಗೆ ಗೊತ್ತಿಲ್ಲ. ಪಂಚನಾಮೆ ಮಾಡಿದ ಸ್ಥಳದಲ್ಲಿ ಭೋನ್ ಮತ್ತು ಬಲೆ ಇತ್ತು ಮತ್ತು ಅಲ್ಲಿ ಫಾರೆಸ್ಟ್ ಅಧಿಕಾರಿಗಳು ಬಂದಿರುತ್ತಾರೆ. ನಿಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ವಾಟೀ ಸವಾಲು: 3ನೇ ಆರೋಪಿ ಪರವಾಗಿ ಶ್ರೀ ಪಿ ಟಿ ಎನ್ ವಕೀಲರಿಂದ: -**

ನಾನು ದೇವದುರ್ಗ ವಲಯ ಅರಣ್ಯ ದಲ್ಲಿ ವಾಚರ ಎಂದು ಕೆಲಸ ಮಾಡುತ್ತಿದ್ದೇನೆ. ದೇವದುರ್ಗ ವಲಯ ಅರಣ್ಯ ದಲ್ಲಿ ವಾಚರ ಎಂದು ಸುಮಾರು 40 ಜನ ಕೆಲಸ ಮಾಡುತ್ತೇವೆ. ಆಗ ಚಾಸಾ-3 ರವರು

ಎ ಪಿ ಎಮ್ ಸಿ ಯಲ್ಲಿ ವಾಚರ ಎಂದು ಕೆಲಸ ಮಾಡುತ್ತಿದ್ದರು. ಚಾಸಾ-3 ರವರು ಪಂಚನಾಮೆ ಮಾಡುವ ಪೂರ್ವದಲ್ಲಿ ಎಲ್ಲಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಪಂಚನಾಮೆಗೆ ಸಹಿ ಮಾಡಿದ್ದೇನೆ ಎಷ್ಟು ಸಹಿ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ. ಪಂಚನಾಮೆಗೆ ಬರೆದ ಹಾಳೆ ಮೇಲೆ ಸಹಿ ಮಾಡಿದ್ದೀರೋ ಅಥವಾ ಖಾಲಿ ಹಾಳೆಯ ಮೇಲೆ ಸಹಿ ಮಾಡಿದ್ದೀರೋ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ. ಪಂಚನಾಮೆಯಲ್ಲಿ ಏನೂ ವಿಷಯ ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ನಾವು 4 ಜನ ಬಿಟ್ಟು ಬೇರೆ ಯಾರು ಇರಲಿಲ್ಲ. ಬೋನ್ ಮತ್ತು ಬಲೆ ಎಷ್ಟು ಫೀಟ್ ಉದ್ದ ಇತ್ತು ಎಂದು ನನಗೆ ನೆನಪಿಲ್ಲ. ಈ ಕೇಸ್ ನ ಬಗ್ಗೆ ನಿಮಗೆ ಏನೂ ಮಾಹಿತಿ ಇಲ್ಲ ನಿಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು: 4ನೇ ಆರೋಪಿ ಪರವಾಗಿ ಶ್ರೀ ಹೆಚ್.ಕೆ. ವಕೀಲರಿಂದ: -**

ಆರೋಪಿ ನಂಬರ್ 1 ರಿಂದ 3ನೇ ಪರ ವಕೀಲರ ಪಾಟೀಸವಾಲು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿಸಲಾಯಿತು.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

# Government of Karnataka
# Deposition Sheet (R.P.N.57) Form 4 Criminal
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 534/2025 |

ದಿನಾಂಕ 30-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 3 ಪ್ರಾಸಾಃ 2

| | |
|---|---|
| ಹೆಸರು | ರಂಗನಾಥ |
| ತಂದೆಯ ಹೆಸರು | ಗೋವಿಂದಪ್ಪ |
| ವಯಸ್ಸು | 36 ವರ್ಷ |
| ಉದ್ಯೋಗ | ಫಾರೆಸ್ಟ್ ವಾಚರ್ ಸಮುದ್ರ |
| ವಾಸಸ್ಥಳ | ಸಮುದ್ರ ತಾ: ದೇವದುರ್ಗ |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ -**

ನಾನು ಸುಮಾರು 12 ವರ್ಷದಿಂದ ಫಾರೆಸ್ಟ್ ವಾಚರ್ ಆಗಿ ಕೆಲಸ ಮಾಡಿಕೊಂಡಿದ್ದೇನೆ.

ಚಾಸಾ-1 ರವರು ಆರ್ ಎಫ್ ಓ ಅಂತಾ ಕೆಲಸ ಮಾಡುತ್ತಿದ್ದರು. ಚಾಸಾ-3 ರಿಂದ 13 ರವರು ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ ನನಗೆ ಪರಿಚಯ ಇರುತ್ತಾರೆ. ಚಾಸಾ-14 ರಿಂದ 16 ರವರು ನನಗೆ ಪರಿಚಯ ಇರುತ್ತಾರೆ. ಆರೋಪಿತರ ಪರಿಚಯ ಇಲ್ಲ. ಸಾಕ್ಷಿಯು ಗುನ್ಹೆ ಜಾಗದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ:ಪಿ-1 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ:ಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ: 09-07-2024 ರಂದು ಕಮದಾಳ ಗ್ರಾಮದ ಗುಡ್ಡದ ಹತ್ತಿರ ಮಾಡಿರುತ್ತೇನೆ. ಕಮದಾಳ ಗ್ರಾಮದ ಗುಡ್ಡದಲ್ಲಿ ಚಿರತೆ ಕಾಣಿಸಿಕೊಂಡಿತ್ತು, ಚಿರತೆ ಹಿಡಿಯುವ ಕಾರ್ಯಾಚರಣೆಯಲ್ಲಿ ಅವಶ್ಯಕವಾಗಿರುವ ಭೋನ್ ಮತ್ತು ಬಲೆಯನ್ನು ತೆಗೆದುಕೊಂಡು ಹೋಗಿರುತ್ತೇವೆ. ಆ ಸಮಯದಲ್ಲಿ ಚಿರತೆಯನ್ನು ಊರಿನ ಜನರು ಕೊಂದಿರುತ್ತಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ಗುನ್ಹೆಸ್ಥಳಕ್ಕೆ ಹೋದಾಗ ಅಲ್ಲಿದ್ದ ಊರಿನ ಜನರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಹಿಂದೆ ಸರಿಸಿರುತ್ತಾರೆ. ಈ ಕುರಿತು ಪಂಚನಾಮೆ ಬೆಳಿಗ್ಗೆ 9-00 ಗಂಟೆಯಿಂದ 10-00 ಗಂಟೆಯವರೆಗೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಮಾಡುವಾಗ ಎರಡು ಛಾಯಾ ಚಿತ್ರಗಳನ್ನು ತೆಗೆಸಿರುತ್ತಾರೆ. ಸಾಕ್ಷಿದಾರರು ಸದರಿ ಛಾಯಾ ಚಿತ್ರದಲ್ಲಿ ತನ್ನನ್ನು ಮತ್ತು ಚಾಸಾ-2 ಹಾಗೂ ಪೋಲಿಸ್

ಅಧಿಕಾರಿಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ಕ್ರಮವಾಗಿ ನಿ ಪಿ 2 ಮತ್ತು 3 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು: 1ನೇ ಆರೋಪಿ ಪರವಾಗಿ ಶ್ರೀ ಎಸ್ ಪಿ ವಕೀಲರಿಂದ:**

1. ಚಾಸಾ-1 ರವರು ನಿಮ್ಮ ಮೇಲಾಧಿಕಾರಿಗಳಾಗಿರುತ್ತಾರೆ ಎಂದರೆ ಸರಿ. ಅವರು ಹೇಳಿದ ಕೆಲಸವನ್ನು ನೀವು ಮಾಡಬೇಕಾಗುತ್ತದೆ ಎಂದರೆ ಸರಿ. ಪಂಚನಾಮೆ ಮಾಡುವ ಕಾಲಕ್ಕೆ ನನ್ನ ಜೊತೆಗೆ ಚಾಸಾ-1, 3 ಮತ್ತು ಪೋಲಿಸರು ಇದ್ದರು. ಪೋಲಿಸರ ಹೆಸರು ನನಗೆ ಹೇಳಲು ಬರುವುದಿಲ್ಲ. ಫಾರೆಸ್ಟ್ ಕಚೇರಿಯಿಂದ ಕಮದಾಳ ಗುನ್ನೆ ಸ್ಥಳ ಸುಮಾರು 6-7 ಕಿ ಮಿ ದೂರ ಆಗುತ್ತದೆ. ಅದು ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋದಾಗ ಸಮಯ ಬೆಳಿಗ್ಗೆ 9-00 ಗಂಟೆ ಆಗಿತ್ತು. ಪಂಚನಾಮೆ ಮಾಡುವ ಕಾಲಕ್ಕೆ ನಾನು ಚಾಸಾ-1, 3 ಮತ್ತು ಪೋಲಿಸರನ್ನು ಹೊರತುಪಡಿಸಿ ಊರಿನ ಜನರು ಅಲ್ಲಿ ಇರಲಿಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ಏನೂ ವಸ್ತು ಜಪ್ತಿ ಮಾಡಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಪಂಚನಾಮೆ ಮಾಡಿದ ಸ್ಥಳದ ಚಕ್‌ಬಂದಿ ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಯನ್ನು ಚಿರತೆ ಕೊಂದಿದ ಸಂಬಂಧ ಮಾಡಿರುತ್ತಾರೆ. ಚಿರತೆ ಸ್ಥಳದಲ್ಲಿ ಇರಲಿಲ್ಲ. ದಿನಾಂಕ: 09-07-2024 ರಂದು ಬೆಳಿಗ್ಗೆ 9-00 ರಿಂದ 10-00 ಗಂಟೆಯವರೆಗೆ ನಿಮ್ಮ ಮತ್ತು ಚಾಸಾ-3 ರವರ ಸಮಕ್ಷಮ ಕಮದಾಳ ಗ್ರಾಮದ ಗುಡ್ಡದಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು: 2ನೇ ಆರೋಪಿ ಪರವಾಗಿ ಶ್ರೀ ಎಸ್ ಆರ್ ವಕೀಲರಿಂದ: -**

ಪಂಚನಾಮೆ ಮಾಡುವ ಕಾಲಕ್ಕೆ ನಾನು ಕಮದಾಳ ಗ್ರಾಮಕ್ಕೆ ಹೋಗಿದ್ದೇನು. ಪಂಚನಾಮೆ ಮಾಡಿದ ಸ್ಥಳದಲ್ಲಿ ಕಟ್ಟಿಗೆ, ಕಲ್ಲುಗಳು ಬಿದ್ದಿರುವ ಬಗ್ಗೆ ನನಗೆ ಗೊತ್ತಿಲ್ಲ. ಪಂಚನಾಮೆ ಮಾಡಿದ ಸ್ಥಳದಲ್ಲಿ ಭೋನ್ ಮತ್ತು ಬಲೆ ಇತ್ತು ಮತ್ತು ಅಲ್ಲಿ ಫಾರೆಸ್ಟ್ ಅಧಿಕಾರಿಗಳು ಬಂದಿರುತ್ತಾರೆ. ನಿಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು: 3ನೇ ಆರೋಪಿ ಪರವಾಗಿ ಶ್ರೀ ಪಿ ಟಿ ಎನ್ ವಕೀಲರಿಂದ: -**

ನಾನು ದೇವದುರ್ಗ ವಲಯ ಅರಣ್ಯ ದಲ್ಲಿ ವಾಚರ ಎಂದು ಕೆಲಸ ಮಾಡುತ್ತಿದ್ದೇನೆ. ದೇವದುರ್ಗ ವಲಯ ಅರಣ್ಯ ದಲ್ಲಿ ವಾಚರ ಎಂದು ಸುಮಾರು 40 ಜನ ಕೆಲಸ ಮಾಡುತ್ತೇವೆ. ಆಗ ನಾನು ಎ ಪಿ

ಎಮ್ ಸಿ ಯಲ್ಲಿ ವಾಚರ ಎಂದು ಕೆಲಸ ಮಾಡುತ್ತಿದ್ದೇನು. ಪಂಚನಾಮೆಗೆ ನನ್ನ ಮೇಲಾಧಿಕಾರಿಗಳು ನನ್ನನ್ನು ಕರೆದಿರುತ್ತಾರೆ. ನಾನು ಸ್ಥಳಕ್ಕೆ ಮಧ್ಯಾಹ್ನ 3-00 ಗಂಟೆಗೆ ಹೋಗಿದ್ದೇನು. ನಾನು ಅಲ್ಲಿಗೆ ಹೋದಾಗ ನಾವು 5 ಜನ ಇದ್ದೇವು. ಅಲ್ಲಿ ನನ್ನ ಜೊತೆಗೆ ಚಾಸಾ-1, 2 ಮತ್ತು ಇಬ್ಬರು ಪೋಲಿಸರು ಇದ್ದರು. ಸ್ಥಳದಲ್ಲಿ ಒಂದು ತಾಸನಿವರೆಗೆ ನಾನು ಇದ್ದೇನು. ನಾನು ಬರೆದ ಹಾಳೆಗೆ ಒಂದೇ ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಏನೂ ವಿಷಯ ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ನಾವು 4 ಜನ ಬಿಟ್ಟು ಬೇರೆ ಯಾರು ಇರಲಿಲ್ಲ. ಬೋನ್ ಮತ್ತು ಬಲೆ ಎಷ್ಟು ಫೀಟ್ ಉದ್ದ ಇತ್ತು ಎಂದು ನನಗೆ ನೆನಪಿಲ್ಲ. ಈ ಕೇಸ್ ನ ಬಗ್ಗೆ ನಿಮಗೆ ಏನೂ ಮಾಹಿತಿ ಇಲ್ಲ ನಿಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು: 4ನೇ ಆರೋಪಿ ಪರವಾಗಿ ಶ್ರೀ ಹೆಚ್.ಕೆ. ವಕೀಲರಿಂದ: -**

ಆರೋಪಿ ನಂಬರ್ 1 ರಿಂದ 3ನೇ ಪರ ವಕೀಲರ ಪಾಟೀಸವಾಲು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿಸಲಾಯಿತು.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ